quickmarketreports.com Date : 07-10-2015

# ನೈಜೀರಿಯಾದ ಉತ್ಪಾದನಾ ವಲಯ ಪುನಃಶ್ಚೇತನ

ಇನ್‌ವೆಸ್ಟ್‌ಮೆಂಟ್ ಬ್ಯಾಂಕಿಂಗ್ ಗ್ರೂಪ್, ಎಫ್‌ಬಿಎನ್ ಕ್ಯಾಪಿಟಲ್ ಅದರ ಪರ್ಚೇಸಿಂಗ್ ಕ್ಯಾಪಿಟಲ್ ಇಂಡೆಕ್ಸ್ ನೈಜೀರಿಯಾದ ಉತ್ಪಾದನಾ ವಲಯ ಸದ್ಯದಲ್ಲೇ ಪುನಃಶ್ಚೇತನಗೊಳ್ಳಲಿವೆಯೆಂದಿದೆ.

ಈ ಹಿಂದೆ ಉತ್ಪಾದನಾ ವಲಯ ಉತ್ಪಾದನಾ ಕೊರತೆ ಹೊಂದಿತ್ತು. 2015ರ ಗಳಿಕೆಯನ್ನು ಗಮನಿಸಿದಾಗ, ಈ ವರ್ಷ ಗೋಡಂಬಿಯ ಜಾಗತಿಕ ಮಾರುಕಟ್ಟೆ ಬೇಡಿಕೆ ಹೆಚ್ಚಳದಿಂದ ಪರಿಸ್ಥಿತಿ ಉತ್ತಮಗೊಂಡಿದೆಯೆಂದು ನೈಜೀಯಾದ ಕ್ಯಾಶೂ ಅಸೋಸಿಯೇಶನ್ ಹೇಳಿದೆ. ನೈಜೀರಿಯಾದ ಕ್ಯಾಶ್ಯೂ ಅಸೋಸಿಯೇಶನ್ ಚಟುವಟಿಕೆಗಳಿಂದ ಅಲ್ಲಿ ಗೋಡಂಬಿ ಬೆಳೆಯುವ ಪ್ರದೇಶ ಹೆಚ್ಚಳವಾಗಿ, ಗೋಡಂಬಿ ಸಂಸ್ಕರಣೆಯಲ್ಲೂ ಹೆಚ್ಚಳವಾಗಲಿದೆ. ಅಸೋಸಿಯೇಶನ್ 5 ಮಿಲಿಯನ್ ಡಾಲರ್‌ಗಳ 6700 ಕಂಟೈನರ್‌ಗಳ ರಫ್ತಿಗೆ ಸಹಿಮಾಡಿದೆ. ಇದರಿಂದ ವಿಯೆಟ್ನಾಂ, ಭಾರತ ಹಾಗೂ ಇತರ ಏಶ್ಯಾನ್ ದೇಶಗಳಿಗೆ ಕಚ್ಚಾಗೋಡಂಬಿ ರಫ್ತಾಗಲಿದೆ. ಫಾರ್ಮಸ್ಯೂಟಿಕಲ್ ಸಹಿತ ಇತರ ಉತ್ಪಾದನಾ ವಲಯಗಳಲ್ಲಿ ಹೂಡಿಕೆಗೆ ಚಿಂತನೆ ಮಾಡಲಾಗುತ್ತಿದೆಯೆನ್ನಲಾಗಿದೆ.